# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 135 |
| ಸದಸ್ಯರ ಹೆಸರು | : | ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 14-02-2023 |
| ಉತ್ತರಿಸುವವರು | : | ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳು ಮೂಲ ಸೌಲಭ್ಯಗಳಿಂದ ವಂಚಿತವಾಗಿರುವುದು ನಿಜವೇ; ಹಾಗಿದ್ದಲ್ಲಿ, ರಾಜ್ಯ ಸರ್ಕಾರವು ಹೊಸದಾಗಿ 4244 ಅಂಗನವಾಡಿ ಕೇಂದ್ರಗಳ ಪ್ರಾರಂಭಕ್ಕೆ ಮತ್ತು ಮಿನಿ ಅಂಗನವಾಡಿಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಅನುಮೋದನೆ ನೀಡಿದೆಯೇ; | ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಮೂಲಭೂತ ಸೌಲಭ್ಯ ಹೊಂದಿರುವ ಅಂಗನವಾಡಿ ಕೇಂದ್ರಗಳ ವಿವರ ಈ ಕೆಳಕಂಡಂತಿದೆ :-<br><br>**ಸೌಲಭ್ಯದ ವಿವರ** — **ಸೌಲಭ್ಯ ಹೊಂದಿರುವ ಅಂಗನವಾಡಿ ಕೇಂದ್ರಗಳ ಸಂಖ್ಯೆ**<br>ಶೌಚಾಲಯ — 64187<br>ನೀರಿನ ಸೌಲಭ್ಯ — 57057<br>ವಿದ್ಯುತ್ ಸಂಪರ್ಕ — 65026<br>ಫ್ಯಾನ್ — 64531<br><br>ನೀರಿನ ಸೌಲಭ್ಯವಿಲ್ಲದ ಅಂಗನವಾಡಿ ಕೇಂದ್ರಗಳಿಗೆ ಶುದ್ಧ ನೀರಿನ ಘಟಕದಿಂದ/ಹತ್ತಿರದ ಕೊಳವೆ ಬಾವಿಯಿಂದ ನೀರಿನ ಸೌಲಭ್ಯ ಒದಗಿಸಲು ಕ್ರಮ ಕೈಗೊಳ್ಳಲಾಗಿದೆ.<br><br>ದಿನಾಂಕ:01.09.2023ರಂದು 4244 ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಅನುಮೋದನೆಯನ್ನು ನೀಡಲಾಗಿದೆ. 400ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ 1002 ಮಿನಿ ಅಂಗನವಾಡಿ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಕೇಂದ್ರ ಸರ್ಕಾರದಿಂದ ಅನುಮೋದನೆ ದೊರತಿದ್ದು, ಮೇಲ್ದರ್ಜೆಗೇರಿಸಲು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ. |
| ಆ. | ಹಾಗಿದ್ದಲ್ಲಿ, ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಸರ್ಕಾರ ನಿರ್ಧರಿಸಿದೆ; | ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಜಿಲ್ಲಾವಾರು ಬೇಡಿಕೆಗಳ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |
| (ಇ) | ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ 4244 ಅಂಗನವಾಡಿಗಳಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ನೀಡಲಾಗಿದೆಯೇ; ಅನುಮೋದನೆ ನೀಡದೆ ಇದ್ದರೆ ಇದನ್ನು ರಾಜ್ಯ ಸರ್ಕಾರದಿಂದ ಪ್ರಾರಂಭಿಸಲು ಚಿಂತನೆ ಮಾಡಲಾಗಿದೆಯೇ; | 4244 ಹೊಸ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡಲು ಕೇಂದ್ರ ಸರ್ಕಾರವನ್ನು ಕೋರಲಾಗಿದ್ದು, ಮಂಜೂರಾತಿ ಇನ್ನೂ ದೊರೆತಿರುವುದಿಲ್ಲ. ಆದ್ದರಿಂದ ರಾಜ್ಯ ಸರ್ಕಾರದ ಅನುದಾನದಿಂದಲೇ ಹೊಸದಾಗಿ 4244 ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲು ಮಂಜೂರಾತಿ ನೀಡಲಾಗಿರುತ್ತದೆ. |

| | | |
|---|---|---|
| (ಈ) | ರಾಜ್ಯದಲ್ಲಿರುವ ಹಾಲಿ 63,030 ಅಂಗನವಾಡಿಗಳು ಹಾಗೂ 3331 ಮಿನಿ ಅಂಗನವಾಡಿ ಕೇಂದ್ರಗಳು ಹಲವಾರು ಸೌಲಭ್ಯಗಳಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಎಲ್ಲಾ ಸೌಲಭ್ಯಗಳನ್ನು ಒದಗಿಸಲು ಯಾವ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ? | ಸ್ವಂತ ಮತ್ತು ಇತರೆ ಸರ್ಕಾರಿ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ಕೇಂದ್ರಗಳಿಗೆ ಮೂಲಭೂತ ಸೌಲಭ್ಯಗಳಾದ ಶೌಚಾಲಯ, ವಿದ್ಯುತ್ ಮತ್ತು ಫ್ಯಾನ್ ಸಂಪರ್ಕ ಒದಗಿಸಿರುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಕ್ರಮವಹಿಸಲಾಗಿದೆ:<br><br>1. 2021-22ನೇ ಸಾಲಿನಲ್ಲಿ ಒಟ್ಟು ರೂ.3500.00 ಲಕ್ಷಗಳನ್ನು ಜಿಲ್ಲೆಗಳಿಗೆ ಬಿಡುಗಡೆಗೊಳಿಸಿ, ಸ್ವಂತ ಮತ್ತು ಇತರೆ ಸರ್ಕಾರಿ ಕಟ್ಟಡಗಳ ಅಂಗನವಾಡಿ ಕೇಂದ್ರಗಳಲ್ಲಿ ಆದ್ಯತೆಯ ಮೇರೆಗೆ ಶೌಚಾಲಯ ವ್ಯವಸ್ಥೆ, ವಿದ್ಯುತ್ ಮತ್ತು ಫ್ಯಾನ್ ಸಂಪರ್ಕ ಒದಗಿಸಲು ಕ್ರಮವಹಿಸಲಾಗಿದೆ.<br><br>2. 2019-20, 2020-21 ಮತ್ತು 2021-22 ನೇ ಸಾಲಿನಲ್ಲಿ ಅಂಗನವಾಡಿಗಳ ಕಟ್ಟಡಗಳ ನಿರ್ವಹಣೆ (ಜಿಲ್ಲಾ ವಲಯ) ಯೋಜನೆಯಡಿ ಪ್ರತಿ ವರ್ಷ ರೂ.25.00 ಕೋಟಿ ಅನುದಾನವನ್ನು ಅಂಗನವಾಡಿ ಕಟ್ಟಡಗಳ ನಿರ್ವಹಣೆಗಾಗಿ ಆರ್ಥಿಕ ಇಲಾಖೆಯಿಂದ ನೇರವಾಗಿ ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡಲಾಗಿದೆ.<br><br>3. 2022-23ನೇ ಸಾಲಿಗಾಗಿ ಜಿಲ್ಲಾವಲಯದಲ್ಲಿ ರೂ.2880.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ.<br><br>4. ಪ್ರತಿ ಸಾಲಿನಲ್ಲಿ ಅಂಗನವಾಡಿ ನಿರ್ವಹಣೆ ಯೋಜನೆಯಡಿ ಬಿಡುಗಡೆ ಮಾಡುವ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ಅಂಗನವಾಡಿಗಳಿಗೆ ಕನಿಷ್ಠ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಆದ್ಯತೆಯ ಮೇರೆಗೆ ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ:ಮಮಇ 19 ಐಸಿಡಿ 2023**

Halappa

(ಆಚಾರ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು
ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ
ಹಿರಿಯ ನಾಗರೀಕರ ಸಬಲೀಕರಣ ಸಚಿವರು

| ಶ್ರೀ ಗೋವಿಂದರಾಜು ವಿಧಾನ ಪರಿಷತ್ ಸದಸ್ಯರು ಇವರು ಕೇಳಿರುವ ಪ್ರಶ್ನೆ ಸಂಖ್ಯೆ:121(135)ಗ್ಗೆ ಒದಗಿಸಿರುವ ಅನುಬಂಧ | | |
|---|---|---|
| ಕ್ರ.ಸಂ | ಜಿಲ್ಲೆಯ ಹೆಸರು | ಒಟ್ಟು ಅಂಗನವಾಡಿ ಕೇಂದ್ರಗಳ ಸಂಖ್ಯೆ |
| 1 | 2 | 3 |
| 1 | ಬೆಂಗಳೂರು ನಗರ | 290 |
| 2 | ಬೆಂಗಳೂರು ಗ್ರಾ | 47 |
| 3 | ಚಿತ್ರದುರ್ಗ | 95 |
| 4 | ಕೋಲಾರ | 100 |
| 5 | ಶಿವಮೊಗ್ಗ | 103 |
| 6 | ತುಮಕೂರು | 90 |
| 7 | ಮೈಸೂರು | 47 |
| 8 | ಚಿಕ್ಕಮಗಳೂರು | 33 |
| 9 | ದಕ್ಷಿಣ ಕನ್ನಡ | 22 |
| 10 | ಹಾಸನ | 143 |
| 11 | ಮಡಿಕೇರಿ | 12 |
| 12 | ಮಂಡ್ಯ | 12 |
| 13 | ಬೆಳಗಾವಿ | 325 |
| 14 | ವಿಜಯಪುರ | 424 |
| 15 | ಧಾರವಾಡ | 111 |
| 16 | ಉತ್ತರ ಕನ್ನಡ | 95 |
| 17 | ಕಲಬುರಗಿ | 280 |
| 18 | ಬಳ್ಳಾರಿ | 92 |
| 19 | ವಿಜಯನಗರ | 28 |
| 20 | ಬೀದರ | 153 |
| 21 | ರಾಯಚೂರು | 188 |
| 22 | ಯಾದಗಿರಿ | 181 |
| 23 | ದಾವಣಗೆರೆ | 41 |
| 24 | ರಾಮನಗರ | 43 |
| 25 | ಚಿಕ್ಕಬಳ್ಳಾಪುರ | 50 |
| 26 | ಚಾಮರಾಜನಗರ | 14 |
| 27 | ಉಡುಪಿ | 31 |
| 28 | ಬಾಗಲಕೋಟೆ | 223 |
| 29 | ಗದಗ | 82 |
| 30 | ಹಾವೇರಿ | 73 |
| 31 | ಕೊಪ್ಪಳ | 110 |
| | ಒಟ್ಟು | **3538** |

0